ಶ್ರೀಗದಾಧರಸ್ತೋತ್ರಮ್-೧



ಘನಚೇತನಮಕ್ರಿಯಮಾದಿಮಜಂ
ಚಿರ-ನಿಶ್ಚಲ-ನಿಷ್ಕಲ-ನಿರ್ವಿರುಜಮ್ ।
ಸುಖಸದ್ಮ-ವಿಶುದ್ಧ-ವಿಬುದ್ಧವರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೧ ॥

ಚೈತನ್ಯದ ಘನಸ್ವರೂಪಿಯಾದ, ಕ್ರಿಯಾರಹಿತರಾದ, ಎಲ್ಲದಕ್ಕೂ ಆದಿಯಾದ, ಜನ್ಮರಹಿತರಾದ, ಚಲಿಸದವರೂ ಅವಯವರಹಿತರೂ ರೋಗರಹಿತರೂ ಆದ, ಸುಖದ ನೆಲೆಯಾದ, ಅತ್ಯಂತ ಶುದ್ಧರೂ ಪರಿಪೂರ್ಣ ಜ್ಞಾನಿಯೂ ಆದ ಪರಬ್ರಹ್ಮ ರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

ಶತ-ಶೌರಿ-ಮುರಾರಿ-ತರಂಗಯುತಂ
ಅಯುತಾಯುತ-ಭಾಸ್ಕರ-ಕುಕ್ಷಿಧೃತಮ್ ।
ಸುವಿಶಾಲ-ಸಮುದ್ರ-ಸುದಭ್ರಕರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೨ ॥

ನೂರಾರು ಶೌರಿ, ಮುರಾರಿ ಮೊದಲಾದ ಅವತಾರಗಳೆಂಬ ಅಲೆಗಳಿಂದ ಕೂಡಿದ, ಲಕ್ಷಾಂತರ ಸೂರ್ಯರನ್ನು ತನ್ನೊಳಗೆ ಧರಿಸಿಕೊಂಡಿರುವ ವಿಶಾಲ ಸಮುದ್ರದ ಬಲಿಷ್ಠ ಹಾಗೂ ಬೃಹತ್ ಅಲೆಯಂತಿರುವ ಪರಬ್ರಹ್ಮರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

ಕ್ಷುದಿರಾಮ-ವಿರಾಮ-ವಿಲಾಸಕರಂ
ಛಲಜೃಂಭಿತಕಾರಣಕಾರ್ಯಬಲಮ್ ।
ಜಿತಕಾಂಚನಕಾಮ-ಪ್ರಪಂಚಹರಂ
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೩ ॥

ಕ್ಷುದಿರಾಮನ ಮನೆಯನ್ನು ಆನಂದ ವಿಲಾಸಗಳಿಂದ ತುಂಬಿದ, ಮಾಯಾಪ್ರಭಾವದಿಂದ ವಿಕಾಸಗೊಂಡ ಕಾರಣ-ಕಾರ್ಯ ಬಲವನ್ನರಿತಿರುವ, ಕಾಂಚನ-ಕಾಮಗಳನ್ನು ಗೆದ್ದು ಪ್ರಪಂಚವನ್ನು ದೂರೀಕರಿಸಿಕೊಂಡಿರುವ ಪರಬ್ರಹ್ಮರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

ಯುಗಧರ್ಮಪ್ರವರ್ತಕ-ಗುಪ್ತನರಂ
ಜನಪಾವನ-ಗಾಂಗ್ಯತಟಾವಸಥಮ್ ।
ಶಿಶುಸೌಮ್ಯಮಗಮ್ಯ-ಪ್ರಣಮ್ಯವರಮ್
ಪ್ರಣಮಾಮಿ ಗದಾಧರ-ಬ್ರಹ್ಮಪರಮ್ ॥ ೪ ॥

ನರರೂಪದಲ್ಲಿದ್ದುಕೊಂಡು ಯುಗಧರ್ಮವನ್ನು ಪ್ರವರ್ತಿಸುವಂತೆ ಮಾಡಿದ, ಸಕಲರನ್ನೂ ಪಾವನಗೊಳಿಸುವ ಗಂಗೆಯ ದಡದಲ್ಲಿ ವಾಸಿಸುವ, ಮಗುವಿನಂತೆ ಪ್ರಶಾಂತರಾಗಿರುವ, ಅರಿವಿಗೆ ನಿಲುಕದ, ನಮಸ್ಕರಿಸಲು ಯೋಗ್ಯರಾದವರಲ್ಲಿ ಶ್ರೇಷ್ಠರಾದ ಪರಬ್ರಹ್ಮರೂಪಿ ಗದಾಧರ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

— ಶರಚ್ಚಂದ್ರ ಚಕ್ರವರ್ತಿ

ಸೂಕ್ತಿಪ್ರಭ

ಯಾರು ಬಡವನಿಗೆ ಒಂದು ಸಣ್ಣ ನಾಣ್ಯವನ್ನು ಕೊಡುತ್ತಾನೋ ಅವನ ಮೇಲೆ ಆರು ಆಶೀರ್ವಾದಗಳು ಬಂದು ಸೇರುವವು. ಆದರೆ ಯಾರು ಅವನಲ್ಲಿ ಅನುಕಂಪದ ನುಡಿಗಳನ್ನಾಡುವನೋ ಅವನಿಗೆ ಹನ್ನೊಂದು ಆಶೀರ್ವಾದಗಳು ಬಂದೊದಗುವುವು.

— ತಾಲ್ಮಡ್

ಹಗಲನ್ನು ಒಂದು ಸಣ್ಣ ರಂಧ್ರದ ಮೂಲಕವೂ ಕಾಣಬಹುದು. ಅದೇ ರೀತಿ ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ಅವನ ಸಣ್ಣ ಸಂಗತಿಯೂ ಪ್ರಕಟಪಡಿಸುವುದು.

— ಸ್ಯಾಮುವೆಲ್ ಸ್ಮೈಲ್ಸ್

ಹೃದಯದಲ್ಲಿ ಅಲೌಕಿಕ ಜಾಗೃತಿ ಉಂಟಾದಾಗ ನಮ್ಮ ಆತ್ಮವು ಕತ್ತಲಿನಿಂದ ಬೆಳಕಿನೆಡೆಗೆ, ನಶ್ವರದಿಂದ ಶಾಶ್ವತದೆಡೆಗೆ ದೃಷ್ಟಿ ಹೊರಳಿಸುವುದು.

— ಪ್ಲೇಟೋ

ಯೇನ ಕೇನ ಪ್ರಕಾರೇಣ ಯಸ್ಯ ಕಸ್ಯಾಪಿ ದೇಹಿನಃ ।
ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರಪೂಜನಮ್ ॥

ಬುದ್ಧಿವಂತನು ಯಾವುದೇ ಪ್ರಕಾರದಿಂದ ಯಾವ ಒಬ್ಬ ಮನುಷ್ಯನಿಗಾದರೂ ಸಂತೋಷವನ್ನುಂಟುಮಾಡಬೇಕು. ಹೀಗೆ ಸಂತೋಷಗೊಳಿಸುವುದೇ ಈಶ್ವರಪೂಜೆ.

— ಸುಭಾಷಿತ